ಸಾಧ್ಯವಿರಲಿಲ್ಲವಲ್ಲ. ತನ್ಮಯವಾಗಿ ಅಭಂಗ್‌ಗಳನ್ನು ಹೇಳುತ್ತಾ ಕುಳಿತರೆ ಮನೆಯ ಗೇಟಿನಾಚೆ ಗುಂಪುಗುಂಪಾಗಿ ನಿಂತು ಕೇಳಿಸಿಕೊಳ್ಳುವವರೆಷ್ಟೋ! ತನ್ನ ಪದದೆಸೆಯಲ್ಲಿ ಕುಳಿತು ಕಣ್ತುಂಬಿ ಸುರಿಯುತ್ತಾ ಕುಳಿತ ಶಿಷ್ಯಕೋಟಿ ಎಷ್ಟೋ! ಆದರೆ ಪಾರ್ವತಿ ಮಾತ್ರ ಸ್ಥಿತಪ್ರಜ್ಞಳಂತೆ ತನ್ನ ಕೋಣೆಯ ಟೀವಿ ಹಚ್ಚಿ ನಾಲಾಯಕ್ ಸೀರಿಯಲ್‌ಗಳಲ್ಲಿ ಕಳೆದು ಹೋಗುತ್ತಿದ್ದಳೆಂದರೆ... 'ಹಾಳು ಯೌವನ... ಯಾವತ್ತು ಅದರ ಕೈಗೆ ಬುದ್ಧಿ ಕೊಡಬಾರದು' ಎಂದು ನಿಡುಸುಯ್ದರು. ಕಟ್ಟಿಕೊಂಡ ದಿನದಿಂದ ಸಾಯುವ ದಿನದವರೆಗು ನಿಷ್ಠೆಯಿಂದ ಬಾಳಿದ ಅವಳ ಕುರಿತು ಈ ಹಳಹಳಿಕೆಯಾದರು ಯಾಕೆನಿಸಿತು. ಅವಳಿಗಾಗಿಯೇ ತಾವೀ ಊರಲ್ಲಿ ನೆಲೆನಿಂತೆವೆಂದುಕೊಂಡರೂ ತಮಗೂ ಬರುಬರುತ್ತಾ ಈ ಊರು ಒಗ್ಗಿ ತಮ್ಮ ಮುಂಬೈಗೆ ವಾಪಸ್ಸಾಗಲೇ ಇಲ್ಲವಲ್ಲ ಎಂದೆನ್ನಿಸಿತು. ಉಯ್ಯಾಲೆಯಲ್ಲಿ ಕುಳಿತು ಮೆಲುವಾಗಿ ತೂಗುವಂತೆ ಆಗ್ಗಾಗ್ಗೆ ಕಾಲನ್ನು ನೆಲಕ್ಕೆ ಒತ್ತುಕೊಟ್ಟು ಚಿಮ್ಮುವುದು ಅಪರಿಹಾರ್ಯವಾಗಿ ನಡೆಯುತ್ತಿತ್ತು. ಮನೆಯ ಹಜಾರದಲ್ಲಿ ಕುಳಿತಿದ್ದವರಿಗೆ ಹಜಾರದ ದೊಡ್ಡ ಕೆತ್ತನೆಯ ಬಾಗಿಲುವಾಡ, ನಂತರದ ಕೈಸಾಲೆ, ಅದರ ಎಡಬದಿಗೆ ತರಗತಿಯ ದೊಡ್ಡ ಕೊಠಡಿಗೆ ತೆರೆದುಕೊಳ್ಳುತ್ತಿದ್ದ ಬಾಗಿಲು ಕಾಣುತ್ತಿತ್ತು. ಕೈಸಾಲೆಯ ನಡುಮಧ್ಯಕ್ಕೆ ಇದ್ದ ತೇಗದ ಹಿರಿದೋಲೆಗಳ ಚಿತ್ತಾರದ ಬಾಗಿಲು ಕಾಣುತ್ತಿರಲಿಲ್ಲ. ಬಾಗಿಲಾಚೆಯ ವಿಶಾಲ ಹೊರಾವರಣದ ಸಂಪಿಗೆ, ಪೇರಲೆ, ನೇರಳೆ, ಪಾರಿಜಾತ, ಸಪೋಟ ವೃಕ್ಷಗಳು ಕಲ್ಲು ಚಪ್ಪರಕ್ಕೆ ಹಬ್ಬಿಸಿದ್ದ ಜಾಜಿ, ಮಲ್ಲಿಗೆಗಳೂ ಬಾಗಿಲಿಗಭಿಮುಖವಾಗಿದ್ದ ಕೆಂಪುಗಾರೆಯ ಬೃಂದಾವನವೂ ಕೈಸಾಲೆಯ ತಂತಿ ಜಾಲರಿಯಿಂದ ಮಸುಕಾಗಿ ಕಾಣಿಸುತ್ತಿತ್ತು.

ಹಜಾರದ ಗಡಿಯಾದರ ಲೋಲಕ ನಾಲ್ಕು ಬಾರಿ ಬಾರಿಸಿತು. ಅವರ ಹೃದಯದಲ್ಲಿ ಹೊಸ ಹುರುಪೊಂದು ಸಂಚರಿಸತೊಡಗಿತು. ನೀನಾ ಚೌಧರಿಯು ಬರುವುದನ್ನು ಅರುಹಿದ ಗಡಿಯಾರವನ್ನು ಆಪ್ತವಾಗಿ ನೋಡಿ ಕಣ್ಣಿಂದ ನೇವರಿಸಿದರು. ಇದು ಅವಳ ಪಾಠದ ಸಮಯ; ಅವಳು ಬರುವಾಗ ಅವರು ಬೇರ್‍ಯಾವ ವಿದ್ಯಾರ್ಥಿಗಳನ್ನೂ ಸೇರಿಸುವುದಿಲ್ಲ. ಪಾಠ ಏಕಾಂತದಲ್ಲಿ ಯಾವ ಅಡಚಣೆಯಿಲ್ಲದೆ ತನ್ಮಯವಾಗಿ ನಡೆಯಬೇಕು. ಇದು ಅವರೇ ಹಾಕಿಕೊಂಡ ನಿಯಮ. ಅವಳೇನೂ ಅಂಥದ್ದನ್ನು ಕೇಳಿರಲಿಲ್ಲ. ಅಸಲು ಆ ಹುಡುಗಿ ತನ್ನ ತಾಯ್ತಂದೆಯರ ಜೊತೆ ವಾರಣಾಸಿಯಿಂದ ಇಲ್ಲಿಗೆ ಸಂಗೀತ ಸಾಧನೆಗಾಗಿಯೇ ಬಂದಿದ್ದಳು. ಗ್ವಾಲಿಯರ್ ಘರಾಣದ ಪ್ರಸಿದ್ಧ ಗಾಯಕ, ಸಾಧಕನಾದ ತನ್ನನ್ನರಸಿ ಬಂದಿದ್ದಳು. ಟೆಲಿಫೋನಿನ ಮಾತುಕತೆಯಾಗಿ ಅವರು ಬರುವ ದಿನವೂ ನಿಗದಿತವಾಗಿ ಅವರಿಲ್ಲಿಗೆ ಬಂದಾಗಲೂ ತನಗೇನೂ ಅನ್ನಿಸಿರಲಿಲ್ಲ. ಇವಳು ತನ್ನ ವಿದ್ಯಾರ್ಥಿಯಾಗಬಲ್ಲಳೋ ಇಲ್ಲವೋ ಎಂದು ಅವಳ ಬನಾರಸಿ ಘರಾಣದ ಅಭ್ಯಾಸದ ವಿವರಗಳನ್ನು ಅವಳು ಪಾಸು ಮಾಡಿದ ಸಂಗೀತ ಪರೀಕ್ಷೆಗಳನ್ನು ಹೇಳಿದಾಗಲೂ ಅವರ ಮನ ಸಂಶಯದಿಂದಲೇ ಇತ್ತು. ಆದರೆ... ಅವಳು ಬಂದಿದ್ದೊಂದು ರೀತಿ, ಇರಸಾಣಿಕೆ, ಹಾಡುಗಾರಿಕೆ ಅವರಿಗೇ ಅರಿವಿಲ್ಲದೆ ಅವರು ಸೋತು ಹೋದರು. ಅಪರಾಹ್ನ ಮೂರು ಗಂಟೆಗೆ ಅವರಿಗೆ ಸಮಯ ಕೊಟ್ಟಿದ್ದರು. ಆ ಸಮಯ ಅಲ್ಲಿ ಆ ಕಲಾಶಾಲೆಯ ಇತರ ವಿದ್ಯಾರ್ಥಿಗಳು ಅಭ್ಯಾಸದಲ್ಲಿದ್ದರು. ಸರಳವಾದ ಸೆಲ್ವಾರ್ ಕಮೀಜ್ ಧರಿಸಿ ಗೌರವದಿಂದ ದುಪ್ಪಟ್ಟಾ ಹೊದ್ದಿದ್ದವಳು. ತನ್ನ ಪ್ರತೀಕ್ಷೆಯಲ್ಲಿ ಕಲಾ ತರಗತಿಯ ಇತರೆ ವಿದ್ಯಾರ್ಥಿಗಳ ಜೊತೆ ಕುಳಿತಿದ್ದವಳು, ಅವರಲ್ಲಿಗೆ ಆ ವಿಶಾಲ ಕೋಣೆಗೆ ಹೋಗಿ ಇನ್ನೂ ತಮ್ಮ ಆಸನದಲ್ಲಿ ಕುಳಿತಿದ್ದರೋ ಇಲ್ಲವೋ... ಹೊದೆದ ದುಪ್ಪಟ್ಟಾವನ್ನು ತಲೆಮೇಲೆ ಹೊದ್ದು ನೇರ ತಮ್ಮ ಕಾಲಬಳಿ ಕುಳಿತು ಬಾಗಿ